Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President




**Rtn. MPHF CA Dev Anand**
Dist. Governor




**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

Volume 39 | Issue - 10 | 5th September 2024

## “ಪ್ರಸ್ತುತ ಕಾಲಘಟ್ಟದಲ್ಲಿ ತಾಂತ್ರಿಕ ಶಿಕ್ಷಣದ ಅಗತ್ಯತೆ”

ಮುಖ್ಯ ಅತಿಥಿ :
ಶ್ರೀ ಯೋಗಿಶ್ ಬಂಕೇಶ್ವರ್
ಜೂನಿಯರ್ ಟ್ರೈನಿಂಗ್ ಆಫೀಸರ್
Fr. ರಾಬರ್ಟ್ Z M ಡಿಸೋಜಾ ಮೆಮೊರಿಯಲ್ ITI ನಾಡ

**ಶಿಕ್ಷಕರ ದಿನಾಚರಣೆ ಮತ್ತು ಸನ್ಮಾನ**

Time : 7.00 p.m.
Venue : Hotel Shivaprasad Grand, Kundapura

**39th year of Service and Fellowship**

# ಸಂಪಾದಕೀಯ.... :



ಮಾನವ ಒಬ್ಬ ಸಂಘ ಜೀವಿ. ಪರಸ್ಪರ ಸಹಾಯ, ಸಹಕಾರ, ಅವಲಂಬನೆ ಇರುವುದರಿಂದ ನಾಗರೀಕತೆಯ ಮತ್ತು ಸಮಾಜದ ಸೃಷ್ಟಿಯಾಯಿತು. ಒಂದು ಮಗು ಅಥವಾ ಒಂದು ಜೀವಿ ಹುಟ್ಟಿದಾಗ ಅದರ ಪೋಷಣೆ, ಕಲಿಕೆ ಹಾಗೂ ಸ್ವಭಾವವನ್ನು ರೂಪಿಸುವ ಅಗತ್ಯವಿರುತ್ತದೆ. ಅದಕ್ಕಾಗಿ ಕುಟುಂಬದ ಅಗತ್ಯತೆ ಹುಟ್ಟಿಕೊಂಡಿತು. ಕುಟುಂಬದ ಅಸ್ಥಿತ್ವವಿಲ್ಲದಿದ್ದರೆ ಯಾವುದೇ ಸಂಸ್ಕೃತಿ – ಸಮಾಜ ಅಸ್ಥಿತ್ವದಲ್ಲಿರುವುದಿಲ್ಲ. ಇದೊಂದು ಬೆಳವಣಿಗೆಗೆ ತಳಹದಿಯಾಗಿದೆ.

ಕುಟುಂಬವು ವ್ಯಕ್ತಿಗೆ ಭಾವನಾತ್ಮಕ, ಸಾಮಾಜಿಕ, ಆರ್ಥಿಕ ಬೆಂಬಲವನ್ನು ಒದಗಿಸುತ್ತದೆ. ಕುಟುಂಬ ಸದಸ್ಯರು ಪರಸ್ಪರ ಬೆಂಬಲ ನೀಡುವ ಮೂಲಕ ಒಟ್ಟಾಗಿ ಬೆಳೆದ ಹಾಗೂ ಸುಸ್ಥಿತಿಯಲ್ಲಿರುವ ಸಂಬಂಧಗಳನ್ನು ನಿರ್ಮಿಸುತ್ತಾರೆ. ಆದರೆ ಕೆಲವರಿಗೆ ಕುಟುಂಬವು ಬೆಂಬಲದ ಸೆಲೆಯಾಗದೆ ಅಡಚಣೆಯಾಗಿರುತ್ತದೆ. ಅದು ಅವರನ್ನು ಉನ್ನತಿಗೇರಿಸದೆ ಸಂಕಷ್ಟದ ಮಾರ್ಗವಾಗಿ ಬದಲಾಗುತ್ತದೆ. ಕೌಟುಂಬಿಕ ಸಮಸ್ಯೆಗಳು – ಪರಿಹಾರ ಅವುಗಳನ್ನು ನಾವು ನಿಭಾಯಿಸುವ ರೀತಿಯಲ್ಲಿ ಅಡಗಿದೆ.

“ವಸುದೈವ ಕುಟುಂಬಕಂ” ಕುಟುಂಬ ಎಂದರೆ ಬರೇ ಪತಿ– ಪತ್ನಿ, ಮಕ್ಕಳು, ಮಾತ್ರವಲ್ಲ ಸಂಸ್ಥೆಯ ಸಿಬ್ಬಂದಿಗಳು, ಸಹೋದ್ಯೋಗಿಗಳು, ಸಂಘ ಸಂಸ್ಥೆಯ ಸದಸ್ಯರಿರಬಹುದು. ಈ ರೀತಿ ರೋಟರಿ ಕುಟುಂಬವು ಒಂದು ಕುಟುಂಬವೆಂದು ಭಾವಿಸಿ ಭ್ರಾತೃತ್ವವನ್ನು ಬೆಳೆಸಿಕೊಂಡರೆ ಸಮಾಜವು ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲ.

ರೋಟರಿ ಸದಸ್ಯರೆಲ್ಲರೂ ಒಂದೇ ಕುಟುಂಬದವರೆಂಬ ಭಾವನೆಯಿಂದ ಕಾರ್ಯಚಟುವಟಿಕೆಯನ್ನು ನಡೆಸಿ ಸಂಘಟನೆ ಬೆಳೆಸಿದುದರ ಫಲವಾಗಿ 2023–24ರ ಸಾಲಿನ ಅತ್ಯುತ್ತಮ ಕ್ಲಬ್ ಪ್ರಶಸ್ತಿಯಲ್ಲಿ ದ್ವಿತೀಯ ಸ್ಥಾನಿಯಾಗಿ ಹಾಗೂ ಮೀಡಿಯಂ ಕ್ಲಬ್ ವಿಭಾಗದಲ್ಲಿ 27 ಪ್ರಶಸ್ತಿ ತಮ್ಮದಾಗಿಸಿಕೊಂಡಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ ಇದಕ್ಕೆ ಆ ಸಾಲಿನ ಅಧ್ಯಕ್ಷ ರೊ. ಸುರೇಶ್ ಮಲ್ಯ ಹಾಗೂ ತಂಡಕ್ಕೆ ಧನ್ಯವಾದವನ್ನು ಅರ್ಪಿಸಲಿಚ್ಛಿಸುತ್ತೇನೆ.

ಧನ್ಯವಾದಗಳೊಂದಿಗೆ,

**ರೊ. ಡಾ. ಅನುಲೇಖ ಬಾಯರಿ.**

## ವಾರದ ಸಭೆಯ ವರದಿ






ಆಗಸ್ಟ್ ತಿಂಗಳ ಕೊನೆಯ ಸಾಪ್ತಾಹಿಕ ಸಭೆಯು ಕುಟುಂಬ ಸಮ್ಮಿಲನ ಕಾರ್ಯಕ್ರಮವಾಗಿ ಏರ್ಪಡಿಸಿರುವುದರಿಂದ ಇದನ್ನು ಭಂಡಾರ್‌ಕಾರ್ಸ್ ಕಾಲೇಜಿನ ಕುಂಭಾಶಿ ರಾಧಾಬ್ಯಾ ರಂಗಮಂದಿರದಲ್ಲಿ ವಿಜೃಂಭಣೆಯಿಂದ ನಡೆಸಲಾಯಿತು. ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಇತಿಹಾಸದಲ್ಲೇ ಪ್ರಥಮವಾಗಿ ಕುಟುಂಬ ಸಮ್ಮಿಲನ ಕಾರ್ಯಕ್ರಮದಲ್ಲಿ ಹಂಗಾರಕಟ್ಟೆಯ ಯಕ್ಷಗಾನ ಕಲಾಕೇಂದ್ರದ ಹವ್ಯಾಸಿ ಕಲಾವಿದರಿಂದ ‘ಅರ್ಜುನ ಸನ್ಯಾಸಿ’ ಎನ್ನುವ ಹಾಸ್ಯಮಯ ಪ್ರಸಂಗವನ್ನು ಆಡಿ ತೋರಿಸಲಾಯಿತು. ಪ್ರಥಮವಾಗಿ ರೊ. ಶ್ರೀನಿವಾಸ್ ಶೇಟ್‌ರವರ ಪ್ರಾರ್ಥನೆಯೊಂದಿಗೆ ವಾರದ ಸಭೆಯನ್ನು ಪ್ರಾರಂಭಿಸಲಾಯಿತು. ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರು ಕಳೆದ ವಾರದ ವರದಿಯನ್ನು ಸಭೆಗೆ ತಿಳಿಸಿದರು. ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ವಾರದ ಚಿಂತನೆಯಲ್ಲಿ ದೇಹ ಮತ್ತು ಮನಸ್ಸಿನ ಆರೋಗ್ಯದ ಬಗ್ಗೆ ಚಿಂತನೆಯನ್ನು ಪ್ರಸ್ತುತ ಪಡಿಸಿದರು. ರೋಟರಿ ಮಾಹಿತಿಯನ್ನು ನೀಡಿದ ಮಾಜಿ ಸಹಾಯಕ ಗವರ್ನರ್ ರೊ. ಕೆ. ಕೆ. ಕಾಂಚನರು ರೋಟರಿಯಲ್ಲಿರುವ 5 ಸೇವೆಯ ಮಾರ್ಗ (Avenue of Service)ಗಳ ಬಗ್ಗೆ ವಿವರಗಳನ್ನು ನೀಡಿದರು. ಯಕ್ಷಗಾನ ಪ್ರಸಂಗ “ಅರ್ಜುನ ಸನ್ಯಾಸಿ” ಹಿನ್ನಲೆಯ ಬಗ್ಗೆ ರೊ. ಡಾ. ಆದರ್ಶ

ಹೆಬ್ಬಾರರು ಚುಟುಕಾಗಿ ಸಭೆಗೆ ಮಾಹಿತಿಯನ್ನು ನೀಡಿದರು. ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಯಕ್ಷಗಾನ ಮತ್ತು ಕುಟುಂಬ ಸಮ್ಮಿಲನ ಕಾರ್ಯಕ್ರಮದ ಪ್ರಾಯೋಜಕರಾದ ರೊ. ಸಂತೋಷ್ ಕುಮಾರ್ ಶೆಟ್ಟಿ, ರೊ. ಜಯಕರ್ ಶೆಟ್ಟಿ, ರೊ. ಡಾ. ಆದರ್ಶ ಹೆಬ್ಬಾರ್, ರೊ. ಶ್ರೀನಿವಾಸ ಶೇಟ್, ರೊ. ರಮೇಶ್ ಶೆಟ್ಟಿ, ರೊ. ರೇಗನ್ ಲೋಬೋ ಮತ್ತು ರೊ. ಅನಿಲ್ ಡಿ'ಸಿಲ್ವಾರವರನ್ನು ವೇದಿಕೆಯಲ್ಲಿ ಗೌರವಿಸಿ ಅಭಿನಂದಿಸಿದರು. ಯಕ್ಷಗಾನ ಕಾರ್ಯಕ್ರಮದ ಪ್ರಸಂಗವನ್ನು, ಕಲಾವಿದರನ್ನು ಹಾಗೂ ಮೇಳವನ್ನು ಗುರುತಿಸಿ, ಆಮಂತ್ರಿಸಿ ಸಹಕರಿಸಿದ ರೊ. ಡಾ. ಆದರ್ಶ ಹೆಬ್ಬಾರರಿಗೆ ಅಧ್ಯಕ್ಷರು ಧನ್ಯವಾದಗಳನ್ನು ನೀಡಿ ತಂಡದ ಮೇಲ್ವಿಚಾರಕರಾಗಿ ಆಗಮಿಸಿದ್ದ ಶ್ರೀ ಎ. ರಾಜಶೇಖರ ಹೆಬ್ಬಾರ್ ಮತ್ತು ಸ್ನೇಹಿತರಾದ ಶ್ರೀ ಪಿ. ಶ್ರೀನಿವಾಸ ಉಪಾಧ್ಯಾಯರವರಿಗೆ ಸ್ಮರಣಿಕೆಯನ್ನು ನೀಡಿ ಗೌರವಿಸಿದರು. ಮುಂದಿನ ವಾರದ ತಾ. 2ರಿಂದ 6ರ ತನಕ ಇನ್ನರ್ ವೀಲ್ ಕುಂದಾಪುರ ದಕ್ಷಿಣ ಮತ್ತು ಮಧ್ವರಾಜ್ ಎನಿಮಲ್ ಕೇರ್ ಟ್ರಸ್ಟ್ ಮಲ್ಪೆ ಇವರ ಸಹಯೋಗದೊಂದಿಗೆ ನಡೆಯಲಿರುವ ಸಾಕು ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸೆಯ ಬಗ್ಗೆ ಹಾಗೂ ಸೆಪ್ಟೆಂಬರ್ 14ರಂದು ತಲ್ಲೂರಿನಲ್ಲಿ ಚಿನ್ಮಯಿ ಆಸ್ಪತ್ರೆ ಕುಂದಾಪುರ ಮತ್ತು ಯೆನೆಪೋಯ ಇನ್ಸ್ಟಿಟ್ಯೂಟ್ ಆಫ್ ಆಂಕಾಲಜಿ ಮಂಗಳೂರು ಇವರ ಸಹಯೋಗದೊಂದಿಗೆ ಜರುಗಲಿರುವ ಕ್ಯಾನ್ಸರ್ ತಪಾಸಣಾ ಶಿಬಿರದ ಬಗ್ಗೆ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾ ಸಭೆಗೆ ಮಾಹಿತಿ ನೀಡಿದರು. ರೊ. ಸುರೇಖಾ ಪುರಾಣಿಕ್‌ರವರು ಎಲ್ಲರಿಗೂ ಧನ್ಯವಾದಗಳನ್ನು ನೀಡಿದರು. ನಂತರ ಸುಮಾರು 1 ಗಂಟೆ 25 ನಿಮಿಷಗಳ ಕಾಲ ಹಾಸ್ಯಭರಿತವಾದ ಯಕ್ಷಗಾನ ಕಾರ್ಯಕ್ರಮವು ಪ್ರೇಕ್ಷಕರ ಮನಗೆಲ್ಲುವಲ್ಲಿ ಯಶಸ್ವಿಯಾಯಿತು. ಕಾರ್ಯಕ್ರಮದ ನಂತರದ ಸಹಭೋಜನದಲ್ಲಿ ಸದಸ್ಯರೆಲ್ಲರೂ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.










## ಕಳೆದ ವಾರದ ಚಿಂತನೆ

ದೇಹದ ತೂಕ ಕಮ್ಮಿ ಮಾಡಿಕೊಳ್ಳಲು ದೇಹವನ್ನು ಚಲಿಸಬೇಕು ಆದರೆ ಮಾನಸಿಕ ಹಾಗೂ ಭಾವನಾತ್ಮಕ ತೂಕವನ್ನು ಕಮ್ಮಿ ಮಾಡಿಕೊಳ್ಳಲು ಮನಸ್ಸನ್ನು ನಿಶ್ಚಲಗೊಳಿಸಬೇಕು.

To reduce weight we need to move our body .But to reduce our mental & emotional weight we need to still our mind.

**ನೀಡಿದವರು : ರೊ. ಡಾ.. ಉತ್ತಮ್ ಕುಮಾರ್ ಶೆಟ್ಟಿ**

ಕತ್ತಲಾದಾಗ ನಮ್ಮ ನೆರಳೂ ಕೂಡ ನಮ್ಮ ಜೊತೆಗಿರುವುದಿಲ್ಲ
ಅಂತೆಯೇ ನಾವು ಸೋತಾಗ ನಮ್ಮ ಜೊತೆಗೂ ಯಾರೂ ಇರುವುದಿಲ್ಲ
ಜೊತೆಗಿರುವುದು ಆತ್ಮವಿಶ್ವಾಸ ಒಂದೇ.

**Public image in Rotary is very important because of the following reasons:**

1.To convey the message of service to mankind by Rotary for the last 116 years.


2. To convey the knowledge of the magnitude of funds utilised on various humanitarian projects across the globe by TRF.

3.To convey about various programs of both Rotary International and the Rotary foundation.

4. To bring more members into the Rotary to strengthen the movement of Rotary.

5. To raise the funds required for various humanitarian programs.

6. To eliminate any misconceptions about Rotary in the minds of the public.


Rtn. Dr. S. N. Padiyar
1985-86 & 1986-87


Rtn. B. Arun Kumar Shetty
1987-88


Rtn. Dr. H. Rammohan
1988-89


Rtn. K. Shridhar Kamath
1989-90


Rtn. Dr. Anand Nayak
1990-91


Rtn. B. Ramachandra Prabhu
1991-92


Rtn. G. Santhosh Kumar Shetty
1992-93


Rtn. Dr. H. A. Vishweshwar
1993-94


Rtn. Dr. H. R. Hebbar
1994-95



Rtn. K. T. Surendranath
1995-96


Rtn. B. C. Somayaji
1997-98


Rtn. S. Subraya Halambi
1999-2000


Rtn. K. Seetharama Nackathay
2001-02


Rtn. Dr. Umesh Puthran
2003-04


Rtn. A. Shantharam Pai
2005-06

## Rotary Information

**Five Avenue of services**

**1. Club service:-** it is about creating a strong, vibrant club environment where members feel valued and motivated to contribute.

**2. Community service:-** project and activities designed to improve the quality of life within the local community.

**3. Vacational service:-** it reflects rotary's commitment to using ones professional skills and experience to enhance both personal and community welfare.

**4. International service:-**it focuses on addressing global challenges and postering cross borders collaboration to improve conditions worldwide.

**5. Youth service:-** this programs aim to develop the next generation of leaders and support the personal growth of young people.

**By Rtn. K. K. Kanchan**

## ನಾಯಕ

ಜಗದ ಗೋಲಕದಲಿ ಜನರು
ಕೈಯ ಹಿಡಿವರೊ; ಬಿಡುವರೊ;
ಎಂಬ ತರ್ಕಕೆ ಸಿಲುಕಿಹುದು
ನಿನ್ನ ಭಾಗ್ಯದ ಲೋಲಕ!
ಚಿಂತಿಸುವೆಯೇಕೆ....?
ಮುಂದಡಿಯಿಡು ಧೈರ್ಯದಿ;
ಮುಟ್ಟಲು ಗುರಿ; ಆಗಿರು ನೀನೇ
ನಿನ್ನ ಮನದ ಮರ್ಜಿಯ ಮಾಲಕ॥

**- ರೂಪಕ್ ನಾಗರಾಜ**

"The weak can never forgive.
Forgiveness is the attribute of the strong."
**- Mahatma Gandhi**

## Health Corner

ಒಂದು ಚಮಚ ಜೀರಿಗೆಯನ್ನು ಹುರಿದು ಕಂದು ಕಪ್ಪು ಬಣ್ಣಕ್ಕೆ ತಿರುಗಿದ ನಂತರ 100ml ನೀರನ್ನು ಸೇರಿಸಿ 50ml ಗೆ ಇಳಿಸಿ ಸೋಸಿ ಕುಡಿದರೆ ಹೊಟ್ಟೆ ಉಬ್ಬರದ ಸಮಸ್ಯೆ ಪರಿಹಾರವಾಗುತ್ತದೆ.



**47 ವರ್ಷ ಹಿಂದಿನ ನೆನಪು**

2007–08 ಮತ್ತು 2014–15ರ ಸಾಲಿನ ನಮ್ಮ ಕ್ಲಬ್ಬಿನ ಕಾರ್ಯದರ್ಶಿಯಾಗಿ 2 ಬಾರಿ ಸೇವೆ ಸಲ್ಲಿಸಿದ್ದ ಹಾಗೂ ಪ್ರತಿ ವರ್ಷ ನಮ್ಮ ಸಾಪ್ತಾಹಿಕ ಸಭೆಗಳಲ್ಲಿ 100% ಹಾಜರಾತಿಯನ್ನು ದಾಖಲಿಸಿ ಕ್ರಿಯಾಶೀಲರಾಗಿದ್ದ, ದಿವಂಗತ ರೊ. ಪ್ರಕಾಶ್ ನಾಯಕ್ ಹಾಗೂ ನಮ್ಮ ಸದಸ್ಯೆ ರೊ. ನಂದಾ ನಾಯಕ್‌ರವರು ತಾ. 11–09–1977ರಂದು ವಿವಾಹವಾದ ಮಧುರ ಕ್ಷಣದ ನೆನಪು.

## The 4 Way Test

*of the things we think, say or do*

1. Is it the TRUTH?
2. Is it FAIR to all concerned?
3. Will it build GOODWILL and BETTER FRIENDSHIPS?
4. Will it be BENEFICIAL to all concerned?

Email id – rotaryclub.kundapurasouth@gmail.com



Rtn. S. Sadananda Chatra
1996-97


Rtn. K. Suresh Kamath
1998-99


Rtn. S. Vijaya Shetty
2000-01


Rtn. U. S. Shenoy
2002-03


Rtn. Dr. B. V. Udupa
2004-05


Rtn. K. Shantharam Prabhu
2006-07


Rtn. T. Raghavendra Hatwar
2007-08



Rtn. K. Shankar
2008-09


Rtn. S. Jayakar Shetty
2009-10


Rtn. K. K. Kanchan
2010-11


Rtn. Abhinandan A. Shetty
2011-12


Rtn. Vivian Crasto
2012-13


Rtn. G. Shreedhar Shetty
2013-14


Rtn. K. P. Bhat
2014-15


Rtn. P. Vasudeva Karanth
2015-16


Rtn. Aouzline F. Rebello
2016-17



Rtn. J. Srinath Rao
2017-18


Rtn. Johnson D' Almeida
2018-19


Rtn.Devaraj
2019-20


Rtn. Dr. Uttam Kumar Shetty
2020-21


Rtn.Mahendr Shetty
2021-22


Rtn.Sathyanarayana Puranik
2022-23


Rtn.Suresh Mallya
2023-24

*This Bulletin is sponsored by :*
Rtn. Devaraja
Mob. : 9731084055
8073617732

For Private Circulation only